### ಸ್ಫೂರ್ತಿ ಮೈದಾನದಲ್ಲಿ ಶನೈಶ್ಚರ ಪೂಜೆ, ಯುವ ಸಂಸ್ಥೆಗಳ ವಾರ್ಷಿಕೋತ್ಸವ

# ಹೆತ್ತವರು, ಗುರು ಪ್ರತ್ಯಕ್ಷ ದೇವರು: ಮಾಣಿಲ ಶ್ರೀ



ಶ್ರೀಧಾಮ ಮಾಣಿಲದ ಮೋಹನದಾಸ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು.

**ಬನ್ನೂರು** ಫೆ. 13: ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುವ ಮೂಲಕ ಒಗ್ಗಟ್ಟಿನ ಜೀವನ ನಡೆಸಬೇಕು. ಪ್ರತಿ ಮನೆಯಲ್ಲೂ ಧನಾತ್ಮಕ ಚಿಂತನೆಗಳು ಬರಬೇಕು. ಕಣ್ಣಿಗೆ ಕಾಣುವ ದೇವರು ಎಂದೇ ಕರೆಯಲ್ಪಡುವ ತಂದೆ, ತಾಯಿ, ಗುರು ಹಿರಿಯರನ್ನು ಗೌರವಿಸಿದಾಗ ಜೀವನ ಸಾರ್ಥಕವಾಗಲು ಸಾಧ್ಯ ಎಂದು ಶ್ರೀಧಾಮ ಮಾಣಿಲದ ಮೋಹನದಾಸ ಸ್ವಾಮೀಜಿ ಹೇಳಿದರು.

ಬನ್ನೂರು ಸ್ಫೂರ್ತಿ ಮೈದಾನದಲ್ಲಿ ಸ್ಫೂರ್ತಿ ಯುವಕ-ಯುವತಿ ಮಂಡಲ, ಮಹಿಳಾ ಮಂಡಲ ಹಾಗೂ ಬಾಲಸಭಾ ಆಶ್ರಯದಲ್ಲಿ ನಡೆದ 13ನೇ ವರ್ಷದ ಸಾರ್ವಜನಿಕ ಶನೈಶ್ಚರ ಪೂಜೆ ಹಾಗೂ 27ನೇ ವರ್ಷದ ಯುವ ಸಂಸ್ಥೆಗಳ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಸಂಘಟನೆಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿರಬೇಕು. ಸಮಾಜದಲ್ಲಿ ಸಂಕಷ್ಟದಲ್ಲಿ ಇರುವವರನ್ನು ಗುರುತಿಸಿ ಅವರಿಗೆ ನೆರವಾಗಬೇಕು. ದುಶ್ಚಟ ನಿರ್ಮೂಲನೆಗೂ ಸಂಘಟನೆಗಳು ಪ್ರಯತ್ನಿಸುವ ಮೂಲಕ ಸಮಾಜವನ್ನು ತಿದ್ದುವ ಕೆಲಸಗಳು ಆಗಬೇಕಿದೆ ಎಂದರು.

**ಸಂಸ್ಕಾರಯುತ ಶಿಕ್ಷಣ ನೀಡಿ**

ಉದ್ಯಮಿ ಅಶೋಕ್ ಕುಮಾರ್ ರೈ ಕೋಡಿಂಬಾಡಿ ಮಾತನಾಡಿ, ಧರ್ಮ, ಸಂಸ್ಕೃತಿ ಉಳಿದರೆ ದೇಶದ ಉಳಿವು. ಇದಕ್ಕಾಗಿ ನಾವು ಮಾಡಬೇಕಾದ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡುವುದರ ಜತೆಗೆ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಅಧ್ಯಕ್ಷ ಭಾಸ್ಕರ ಗೌಡ ಕೋಡಿಂಬಾಳ ಮಾತನಾಡಿದರು. ನಗರಸಭೆ ಸದಸ್ಯ ರಾಮಣ್ಣ ಗೌಡ ಹಲಂಗ, ಎರಡು ಕನಸು ಧಾರಾವಾಹಿಯ ಕಿರುತೆರೆ ನಟಿ ಶಿಲ್ಪಾ ಶೆಟ್ಟಿ ಮುಖ್ಯ ಅತಿಥಿಯಾಗಿದ್ದರು.

ಉದ್ಯಮಿಗಳಾದ ಸುಧೀರ್ ಶೆಟ್ಟಿ ತೆಂಕಿಲ, ಹರೀಶ್ ಆಚಾರ್ಯ, ನೆಕ್ಕಿಲ ಸ್ನೇಹಕಲಾ ಯುವಕ ಮಂಡಲದ ಮಾಜಿ ಅಧ್ಯಕ್ಷ ಕೆ.ಆರ್. ಬಾಲಕೃಷ್ಣ, ಯುವಕ ಮಂಡಲದ ಅಧ್ಯಕ್ಷ ವಿಶ್ವನಾಥ, ಮಹಿಳಾ ಮಂಡಲದ ಅಧ್ಯಕ್ಷೆ ಶಶಿಕಲಾ, ಯುವತಿ ಮಂಡಲ ಅಧ್ಯಕ್ಷೆ ಸುಜಾತಾ ಡಿ. ಸಾಲಿಯಾನ್ ಹಾಗೂ ಬಾಲಸಭಾ ಅಧ್ಯಕ್ಷ ಶರತ್ ಕುಮಾರ್ ಉಪಸ್ಥಿತರಿದ್ದರು.

**ಸಮ್ಮಾನ, ಪ್ರತಿಭಾ ಪುರಸ್ಕಾರ**

ಶನೈಶ್ಚರ ಕ್ಷೇತ್ರದ ಛಾವಣಿಗೆ ಶೀಟು ಅಳವಡಿಸಿಕೊಟ್ಟ ಉದ್ಯಮಿ ಸುಧೀರ್ ಶೆಟ್ಟಿ ತೆಂಕಿಲ, ಕಿರುತೆರೆ ನಟಿ ಶಿಲ್ಪಾ ಶೆಟ್ಟಿ ಅವರನ್ನು ಇದೇ ಸಂದರ್ಭ ಸಮ್ಮಾನಿಸಲಾಯಿತು. ಉತ್ತಮ ಕಾರ್ಯನಿರ್ವಹಿಸಿದ ಯುವಕ ಮಂಡಲ ಗೌರವಾಧ್ಯಕ್ಷ ನಾಗೇಶ್ ಹಾಗೂ ಸದಸ್ಯ ರಾಘವ ಅವರನ್ನು ಗೌರವಿಸಲಾಯಿತು. ಬನ್ನೂರು ಹಿ.ಪ್ರಾ. ಶಾಲಾ 7ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಆಯಿಷತುಲ್ ರಂಝೀನಾ ಹಾಗೂ ಸುಷ್ಮಾ ಜಿ., ಚಿತ್ರಕಲೆ ಹಾಗೂ ಯೋಗದಲ್ಲಿ ರಾಜ್ಯ ಪ್ರಶಸ್ತಿ ಪಡೆದ ಮನ್ವಿತ್ ನೀರ್ಪಾಜೆ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಅಂಗನವಾಡಿ ಪುಟಾಣಿಗಳು ಪ್ರಾರ್ಥಿಸಿದರು. ಯುವಕ ಮಂಡಲದ ಕಾರ್ಯದರ್ಶಿ ನಿತಿನ್ ಕುಮಾರ್ ಸ್ವಾಗತಿಸಿದರು. ಪೂಜಾ ಸತ್ಯನ್ ವರದಿ ವಾಚಿಸಿದರು. ದಿನೇಶ್ ಸಾಲಿಯಾನ್ ದಂಪತಿ ಸ್ವಾಮೀಜಿಗೆ ಫಲಪುಷ್ಪ ನೀಡಿ ಸ್ವಾಗತಿಸಿದರು. ಮಹಿಳಾ ಮಂಡಲದ ಉಪಾಧ್ಯಕ್ಷೆ ದೇವಿಕಾ ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ಮೊದಲು ಬನ್ನೂರು ಹಿ.ಪ್ರಾ. ಶಾಲಾ ಬಳಿಯಿಂದ ಮೆರವಣಿಗೆ ನಡೆಯಿತು.

### ಶನೈಶ್ಚರ ಪೂಜೆ

ಬೆಳಗ್ಗೆ ಶನೈಶ್ಚರ ಪೂಜೆ ಪ್ರಾರಂಭಗೊಂಡು ಮಧ್ಯಾಹ್ನ ಮಹಾಮಂಗಳಾರತಿ, ಪ್ರಸಾದ ವಿತರಣೆ, ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು. ಬಳಿಕ ಬನ್ನೂರು ಬಿಲ್ಲವ ಫ್ರೆಂಡ್ಸ್‌ನ ಪ್ರಾಯೋಜಕತ್ವದಲ್ಲಿ ಸೀತಾರಾಮ್ ಕಟೀಲು ಅವರ ನಿರೂಪಣೆಯೊಂದಿಗೆ ಯಕ್ಷಗಾನ ಭಾಗವತ ಗಾನ ಸುರಭಿ ರವಿಚಂದ್ರ ಕನ್ನಡಿಕಟ್ಟೆ ಬಳಗದಿಂದ 'ಗಾನ ರಸಧಾರೆ' ವಿಶೇಷ ಕಾರ್ಯಕ್ರಮ ಮೂಡಿಬಂದಿತು.